doc-142
T-P-2

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 124 | ಗುರುವಾರ 10—1—46 | ಬಿಡಿ ಪ್ರತಿ 3 ಪೈ

ಅನ ಮುಪರ !

ರಾಷ್ಟ್ರೀಯ ಸೇನೆ ಕೆಗೊಂಡಿದೆ

ಜಿಂಕರ್‌ಗಾಚಾ ಕ್ಯಾಂಪಿನಲ್ಲಿರುವ ಭಾರತ ರಾಷ್ಟ್ರೀಯ ಸೇನೆಯು ತ್ರಿವರ್ಣ ಧ್ವಜಾರೋಹಣೆಯು ನಿರ್ಬಂಧಿಸಲ್ಪಟ್ಟ ಪ್ರಯುಕ್ತ ಅಸ್ತ ಮುಷ್ಕರ ಕೈಗೊಂಡಿರುವುದಾಗಿ ತಿಳಿಯಬಂದಿದೆ.

ಅಮೇರಿಕಾದಲ್ಲಿ ಮುಷ್ಕರ

ನ್ಯೂ ಯಾರ್ಕ್ ಜ 8— ಇಲ್ಲಿಯ ವೆಸ್ಟರ್ನ್ ಯೂನಿಯನ್ ಕೇಬಲ್ ಕಂಪೆನಿಯ 70 ಸಾವಿರ ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವುದರಿಂದ ನ್ಯೂಯಾರ್ಕಿಗೂ ಪ್ರಪಂಚದ ಇತರ ಕಡೆಗಳಿಗೂ ಟೆಲಿಗ್ರಾಫ್ ವ್ಯವಹಾರ ಬಂದಾಗಿದೆ. ಟೆಲಿಫೋನಿನ ಸ್ಥಿತಿಯೂ ಹೀಗಾಗಬಹುದೆಂಬ ಶಂಕೆ ಇದೆ.

ಪ್ರಸ್ ಕೆಲಸಗಾರರ ಮುಷ್ಕರ

ಕಟಕ್ ಜ 7— ಕಟಕ್ಕಿನ 15 ಪ್ರಮುಖ ಮುದ್ರಣಾಲಯಗಳ ಕೆಲಸಗಾರರು ಮುಷ್ಕರ ಹಿಡಿದಿರುವರು. ಇದು ಇಲ್ಲಿಯ ದಿನ ಪತ್ರಿಕೆಗಳಿಗೂ ಭಂಗ ತಂದಿದೆ. ಇದನ್ನು ಬಗೆಹರಿಸಲ್ಕೆ ಡಿ || ಮ್ಯಾಜಿಸ್ಟ್ರೇಟರು ಪ್ರಯತ್ನಿಸುತ್ತಿದ್ದಾರೆ

ಜಯಪುರದಿಂದ ಗಡೀಪಾರ್

ಶ್ರೀ ರಘುನಂದನಯಾಳ್ ಮೇಲೆ ಜೈಪುರದಿಂದ ಗಡೀಪಾರಾಗಬೇಕೆಂಬ ಆಜ್ಞೆಯು ಹೊರಟಿ ಪ್ರಯುಕ್ತ ಅವರು ಆ ಸ್ಥಳವನ್ನು 7 ನೆ ತಾರೀಖಿನ ದಿನ ಬಿಟ್ಟರು. ಅವರು ಅಖಿಲ ಭಾರತ ಸಂಸ್ಥಾನಗಳ ಪ್ರಜಾಪರಿಷತ್ತಿನ ಜನರಲ್ ಕೌನ್ಸಿಲಿನ ಸದಸ್ಯರು.

ರಂಗೂನಿನಲ್ಲಿ ಇನ್ನೂ 2000 ಮಂದಿ ಐ. ಎ. ಎ. ಜನರು ಇರುವರೆಂದು ಬಿಡಗಡೆಯಾಗಿ ವಾಪಸಾಗಿ ಬಂದಿರುವ ಸೋಲ್ಜರುಗಳು ಹೇಳಿರುತ್ತಾರೆ.

೧೦೦೦ ಮೈಲಿ ನಡೆದುಬಂದರು

ಆಗ್ನೇಯ ಏಷ್ಯಾದಲ್ಲಿ ಆಜಾದ್ ಹಿಂದ್ ಚಳುವಳಿಯಲ್ಲಿ ಭಾಗವಹಿಸಿದ್ದ ಇಬ್ಬರು ಪತ್ರಿಕೋದ್ಯೋಗಿಗಳು ಬ್ಯಾಂಕಾಕಿನಿಂದ ಇಂಫಾಲಿಗೆ 1000 ಮೈಲಿ ನಡೆದುಕೊರೆಡು ಬಂದರು. ಈಗ ದೆಹಲಿಗೆ ಹೊಂಟಿದ್ದಾರೆ.

ಬೋಸರ ನಿಧನ ಖಂಡಿತವೇ

ಕಲ್ಕತ್ತಾ ಜ 8— ಐ. ಎ. ಎ. ಟೋಕಿಯೋ ಕೆಡೆಟ್‌ಗಳು ಈ ವಾರ ಕಲ್ಕತ್ತಾಕ್ಕೆ ವಾಪಸ್ ಬಂದಿರುವರೆಂದೂ ಅವರು ಶ್ರೀ ಸುಭಾಷ ಬೋಸರ ಸ್ಮಶಾನ ಯಾತ್ರೆಯಲ್ಲಿ ಭಾಗವಹಿಸಿದ್ದಾಗಿ ಹೇಳಿದರೆಂದೂ ಪ್ರಕಟವಾಗಿದೆ.

ಅರಬ್ಬೀ-ಯಹೂದಿ ಪ್ರಕರಣ

ಜರೂಸೆಲಂ ಜ 8— ಪ್ಯಾಲಿಸ್ಟೈನಿನ ವಿಚಾರಣಾ ಸಮಿತಿಯು ಕಾರ್ಯಾರಂಭ ಮಾಡಿದೆ. — ಜರೂಸೆಲಂ ಬೀದಿಗಳ ಮೇಲೆಲ್ಲಾ 'ಯಹೂದಿಗಳಿಗೆ ಸ್ಥಿಂಸ್ವತ್ತುಗಳನ್ನು ಮಾರುವ ಅರಬ್ ದ್ರೋಹಿಗಳಿಗೆಲ್ಲಾ ಸಾವು' ಎಂದು 'ರಕ್ಷಸಂಸ್ಥೆಯವರು' ಅಂಟಿಸಿದ್ದಾರೆ.

ಟ್ಯಾಕ್ಸಿ ಮುಷ್ಕರ ತಪ್ಪಿತು

ಬೊಂಬಾಯಿನಲ್ಲಿ ಟ್ಯಾಕ್ಸಿಗಳಿಗೆ ಕೊಡುತ್ತಿರುವ ಪೆಟ್ರೋಲು ಕಡಮೆಯೆಂದು ತಾ || 10 ರಿಂದ ಮುಷ್ಕರ ಪ್ರಾರಂಭಿಸಬೇಕೆಂದಿದ್ದರು; ಆದರೆ ಅಧಿಕಾರಿಗಳು ಹೆಚ್ಚು ಪೆಟ್ರೋಲನ್ನು ಕೊಡಲು ಸಮ್ಮತಿಸಿದ್ದರಿಂದ ಇದು ತಪ್ಪಿತು.

ಟ್ರಸ್ ಬೋರ್ಡು ಮೀಟಿಂಗು

ಮೈಸೂರು ಜ 10 ತಾ | 27 ರಲ್ಲಿ ನಡೆಯಬೇಕೆಂದು ಗೊತ್ತಾಗಿದ್ದ ಟ್ರಸ್ಟ್ ಬೋರ್ಡು ಮೀಟಿಂಗು ತಾ 30 ರಲ್ಲಿ ಬೆಳಿಗ್ಗೆ 8-30 ಕ್ಕೆ ನಡೆಯವುದೆಂದು ತಿಳಿಯುಬಂದಿದೆ

ಎಂ. ಇ. ಎಸ್. ಪಿವರ್ತೀಯರಿಗೆ ಸಜಾ

ರಾವಲ್ಪಿಂಡಿ — ಚಕ್ವಾಲಾ ವಿಮಾನ ನಿಲ್ದಾಣ ಕಟ್ಟುವ ಕೆಲಸದಲ್ಲಿ 20 ಮೂಟೆ ಸಿಮೆಂಟ್ ಕದ್ದ ದರೂಪ ಯೋಗಪಡಿಸಿದ್ದಕ್ಕಾಗಿ ತೇಜಾಸಿಂಗನಿಗೆ 1 ವರ್ಷ ಕಠಿಣ ಸಜಾ ಮತ್ತು 500 ರೂಪಾಯಿಗಳ ದಂಡ ವಿಧಿಸಲಾಗಿದೆ.

(ಐ ಪಿ)

ಕ್ಯಾಪ್ಟ ಸರ್ವಪಲ್ಲಿ ಕೇಶವಲುಗೆ ಪ್ರಶಸ್ತಿ

ಬೆಂಗಳೂರು — ಮದರಾಸಿನ ಕ್ಯಾಪ್ಟ ಸರ್ವಪಲ್ಲಿ ಕೇಶವಲುರವರಿಗೆ ಕರ್ತವ್ಯ ನಿಷ್ಠೆ ಮತ್ತು ಸಾಹಸಗಳಿಗಾಗಿ ಮಿಲಿಟರಿ ಕ್ರಾಸ್ ಪ್ರಶಸ್ತಿ ದೊರೆತಿದೆ. ಮದಂತಾಸು ಗೌರ್ನರರು ಅವರಿಗೆ 5000 ಸಾವಿರ ರೂ. ಬಹುಮಾನವಿತ್ತರು. (ಐ ಪಿ)

ಭಾ. ನೌಕಾ ಶಾಖೆಯಲ್ಲಿ ವಿಲೇವಾರಿ ಶಾಖೆ

ಯುದ್ಧ ಕಾಲದಲ್ಲಿ ಭಾರತ ನೌಕಾ ಶಾಖೆಯು ವಿಲೇವಾರಿ ಸಂಸ್ಥೆ ಅದ್ಭುತವಾಗಿ ದುಡಿಯುತ್ತು. ಅದರೂ ಮೌನವಾಗಿತ್ತೇ ಕೆಲಸಮಾಡಿತು. ಇದರಲ್ಲಿ ನೂರೆ ಅಧಿಕಾರಿಗಳುಳ್ಳ 'ಭದ್ರಾವತಿ' ಎಂಬ ಒಂದೇ ಜಹಜಿದೆ. ಅದರೂ 60 ಸಾಹಸ ಕಾರ್ಯಗಳನ್ನು ಮಾಡಿದೆ. ಯುದ್ಧ ಮುಗಿದರೂ ಇದರ ಕೆಲಸ ಮುಗಿದಿಲ್ಲ. (ಐ. ಪಿ)

ಪೋಲೀಸರು ಗುಂಡು ಹಾರಿಸಿದರು

ರಾಣಿಬೆನ್ನೂರಿನಲ್ಲಿ ಹಿಂದೂ - ಮುಸ್ಲಿಂ ಘರ್ಷಣೆ

ಭಾರತ ರಾಷ್ಟ್ರೀಯ ವೀರರ ಗೌರವಾರ್ಥವಾಗಿ ಹೊರಟ ಮೆರವಣಿಗೆಯು ಮಸೀದಿಯನ್ನು ದಾಟುತ್ತಿದ್ದ ಸಂದರ್ಭದಲ್ಲಿ ಹಲವು ಮುಸ್ಲಿಂರು ಮೆರವಣಿಗೆಯ ಮೇಲೆ ಬಿದ್ದರು. ಗಲಾಟೆ ಪ್ರಬಲಿಸಿದ ಪ್ರಯುಕ್ತ ಪೋಲಿಸರು ಎರಡು ಭಾರಿ ಗುಂಡು ಹಾರಿಸಿದರು. ನಾಲ್ಕು ಮಂದಿಗಳಿಗೆ ಅಪಾಯಕರವಾಗಿ ಗಾಯವೂ ಸಂಭವಿಸಿದೆ. ಪುಂಡರು ಕಟ್ಟಡಗಳಿಗೆ ಬೆಂಕಿ ಹಚ್ಚಿದ್ದರು. ಸಿನಿಮಾ ಗೃಹ ಪೂರ್ಣ ಬೂದಿಯಾಗಿದೆ. ಈ ಸಂದರ್ಭದಲ್ಲಿ ಆವದಸ್ತಗಿರಿ ಖಾ. ಇದು ಮೊನ್ನೆಯ ದಿವಸ ಧಾರವಾಡ ಜಿಲ್ಲೆ ರಾಣಿಬೆನ್ನೂರಿನಲ್ಲಿ ನಡೆಯಿತು.

ವಿವಿಧ ವರ್ತಮಾನ

ಮದರಾಸಿನ ಸರ್ಕಾರದ ಸಪ್ತಾಹಿಕ ರಜಾ ಮಸೂದೆಯನ್ನನುಸರಿಸಿ ಹೋಟೆಲ್ ಸಂಘದವರು ಹೊಟೆಲುಗಳನ್ನು ವಾರಕ್ಕೊಂದು ದಿವಸ ಮುಚ್ಚಲು ತೀರ್ಮಾನಿಸಿರುವರು. ಏಂದೂ ದಿನ ಹೋಟಲನ್ನು ಬೇರೆ ಬೇರೆ ದಿನಗಳಲ್ಲಿ ಮುಚ್ಚಲು ಏರ್ಪಡಿಸಿರುವುದರಿಂದ ಜನರಿಗೆ ಪ್ರತಿನಿತ್ಯವೂ ಒಂದಲ್ಲ ಒಂದು ಹೊಟೆಲ್ ಸಿದ್ಧವಾಗಿರುವುದು.

ಂ ಂ

ಡೆಲ್ಲಿ, ಜ 6 — ಮುಂದಿನ ಕಾಂಗ್ರೆಸ್ಸಾ ಅಧಿವೇಶನದ ಸ್ವಾಗತ ಸಮಿತಿಯು ಹತ್ತು ಸಾವಿರ ಸದಸ್ಯರನ್ನುಳ್ಳ ದ್ದಾಗಿರಬೇಕೆಂದು ಸಿದ್ಧತೆ ನಡೆಯುತ್ತಿರುವುದು.

ಂ ಂ

ಕರಾಚಿ, ಜ 5 — ಭಾರತ ಸ್ವಾತಂತ್ರ್ಯವನ್ನು ತ್ವರೆಗೊಳಿಸಲು ನಮ್ಮ ಕೈಲಾದ್ದನ್ನೆಲ್ಲ ಮಾಡುತ್ತೇವೆಂದು ಪಾರ್ಲಿಮೆಂಟರಿ ರಾಯಭಾರಿಯಾದ ಫಿ || ಸೂರ್ಕಸ್ ಹೇಳಿದ್ದಾರೆ.

ಂ ಂ

'ನಾನು ಮೌಲನಾ ಆಜಾದ್ ಸರ್ದಾರ್ ಪಟೇಲರವರ ಕೈಯಲ್ಲಿಯ ಯಂತ್ರ. ಅವರು ಎಲ್ಲಿಗೆ ಹೋಗಲಿಕ್ಕೆ ಹೇಳಿದರೆ ಅಲ್ಲಿಗೆ ಹೋಗುವುದೇ ನನ್ನ ಕೆಲಸ' ಎಂಬುದಾಗಿ ಪಂಡಿತ ನೆಹರು ಹೇಳಿರುವರು.

ಂ ಂ

ನಡುವಿನ ಸುತ್ತಲೂ 1180 ಬಂಗಾರದ ನಾಣ್ಯಗಳನ್ನು ಕಟ್ಟಕೊಂಡು ಸಮುದ್ರದಲ್ಲಿ ಮುಳುಗಿಹೋದ ಅಂಬ್ಬಯವನ ಶವವು ಕರಾಚಿ ತೀರದಲ್ಲಿ ಕಾಣಬಂದಿತು.

ಂ ಂ

ಈಜಿಪ್ಟಿನವರು ಬ್ರಿಟೀಷರು ತಮಗೆ ಕೊಡಬೇಕಾಗಿರುವ ಸಾಲದಲ್ಲಿ ಕಡಿಮೆ ಮಾಡಲು ಸಮ್ಮತಿಯನ್ನು ಕೊಡಲಿಲ್ಲ.

ಂ ಂ

ತಿರುವಾಂಕೂರು ಸರ್ಕಾರದವರು ಆ ಸಂಸ್ಥಾನದಲ್ಲಿ ಅಥವಾ ಹೊರಕ್ಕೆ ಹತ್ತಿ ಬಟ್ಟೆಗಳನ್ನು ಮತ್ತು ನೂಲನ್ನೂ ಪೋಸ್ಟು ಮುಖಾಂತರ ಕಳುಹಿಸಬಾರದೆಂದು ನಿರ್ಬಂಧ ಆಜ್ಞೆ ಹೊರಡಿಸಿರುವರು.

ಂ ಂ

ಅಮೇರಿಕಾದ ಸಾವಿರಾರು ಸೈನಿಕರ ವಿಮಾನಗಳು ನ್ಯೂಯಾರ್ಕಿನಿಂದ ಭಾರತಕ್ಕೆ ಬರುವಾಗ ಸ್ಪೇಗಿನಲ್ಲಿ ಸ್ವಲ್ಪ ತಂಗಲು ಜುಗೊಸ್ಲೋವಿಯಾ ಸರಕಾರದೊಡನೆ ಒಪ್ಪಂದವಾಗಿರುವುದು.

ಂ ಂ

ಅಖಿಲ ಭಾರತ ಆಗಾಖಾರ್ ವಜ್ರೋತ್ಸವ ನಿಧಿಯು 65 ಲಕ್ಷ ರೂ. ಸೇರಿದೆಯೆಂದಾಗಿ ಹೈದರಾಬಾದಿನ ವರ್ತಮಾನ.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು. ಅರ್ಧ, ಕಾಲು ಪೌಂಡು ಪೊಟ್ಟಣ ಒಂದು ಸಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

" ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾಶರಿಯಾದುದು. ವಿವರಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರ್‌ಪೇಟೆ.

At Ranjit

ಪೃಥ್ವಿರಾಜ್, ಪದ್ಮಿನಿ, ಮೋನಿಕಾ, ದೇಶಾಯಿ, ಮುಂತಾದವರು ನಟಿಸಿರುವ

— ಗೌರಿ —

From 11-I-46

Vish Kanya

ಹರ್ಷ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

ಮೈಸೂರು ದಿ 9 — ಪಟ್ಟಪರ್ತಿಸಲವಂ ಪತ್ರಿಕಾ ಹೇಳಿಕೆಯ ಪ್ರಕಟಣೆಯ ಬಗ್ಗೆ ಹೇಲಿನ್ಯೂಸ್ ಬ್ಯೂರೋದ ಶ್ರೀ ನಾರಾಯಣರಿಗೆ ಜಿಲ್ಲಾಧಿಕಾರಿಗಳು ನೋಟಿಸನ್ನು ಕೊಟ್ಟಿರುವ್ದಂ ಪ್ರಿ. ಅವಸ್ನು ನಿನ್ನೆಯ ದಿನವೆ ವಾಪಸು ಪಡೆಯಲಾಗಿದೆ.

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿವರಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ, ಚಾಮರಾಜಪುರಂ, ಮೈಸೂರು

ಅಮೇರಿಕಾದಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲ್‌ರವರು

At Opera — 3 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಪ್ಪ

ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

L. N. Press

Sriramp st MYSORE

For Good Printing

Edited, Printed and published by M. S. Krishna Rao, at the Satyavadi Press, Chamaraja Agrahar, Mysore

ರಕ್ತವರ್ಧಿಗೆ - ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿ ೧ ಕ್ಕೆ ಒಂದು ರೂಪಾಯಿ

ನಿಳಾಸ — ಶಕ್ತಿ ಸುಧಾ, ೧೮೬೭ ಚಾಮರಾಜಪುರಂ, ಮೈಸೂರು